ಹೆಚ್ಚುವರಿ ಇಪ್ಪತ್ತು ಸಾವಿರ ಗೀತಾಳ ಮಧ್ಯಮವರ್ಗದ ಪುಟ್ಟ ಕುಟುಂಬಕ್ಕೆ ತಮ್ಮ ಹೆಚ್ಚುವರಿ ಆಸೆಗಳನ್ನು ಪೂರೈಸಿಕೊಳ್ಳಲು ಸಹಾಯವಾಗಿತ್ತು. ಗೀತಾ ಸಮಯ ಸಿಕ್ಕಾಗಲೆಲ್ಲ ತನ್ನ ಬುದ್ಧಿವಂತಿಕೆಯನ್ನು ಮತ್ತು ದೂರದ ನಂಟರನ್ನು ಹೊಗಳಿದ್ದೇ ಹೊಗಳಿದ್ದು. ಸರಿಯಾಗಿ ಹತ್ತನೇ ತಾರೀಕು ಸಂಜೆ ನಾವು ನೆನಪಿಸದೆಯೂ, ಕೇಳದೆಯೂ ಬಡ್ಡಿ ದುಡ್ಡು ತಂದುಕೊಡುವ ಸಾಲಗಾರನೆಂದರೆ ಯಾರಿಗಾದರೂ ಮೆಚ್ಚುಗೆಯಾಗಲೇಬೇಕು.

ನಾಲ್ಕೈದು ತಿಂಗಳು ಸರಿಯಾಗಿ ಹತ್ತನೇ ತಾರೀಕು ಸಂಜೆ ಬಡ್ಡಿ ದುಡ್ಡು ತಂದುಕೊಟ್ಟವರು, ನಂತರದ ತಿಂಗಳು ಆ ದಿನ ಸಂಜೆ ಬರದಿದ್ದಾಗ ಸ್ವಲ್ಪ ಕಸಿವಿಸಿಯಾದರೂ, ಇರಲಿ, ನಾಳೆ ಬರಬಹುದೆಂದು ಸುಮ್ಮನಾದಳು ಗೀತಾ. ಆದರೂ, ಅವಳ ಮುಖದಲ್ಲಿದ್ದ ಕಳವಳವನ್ನು ಕಂಡು ಅದು ಬಡ್ಡಿ ವಿಚಾರವೇ ಎಂದು ನನಗೆ ತಿಳಿದಿತ್ತು. ಆ ತಿಂಗಳು ಹದಿನೈದನೇ ತಾರೀಕು ಸಂಜೆ ಆಸಾಮಿ ಪ್ರತ್ಯಕ್ಷವಾಗಿ, ತಡವಾದದ್ದಕ್ಕೆ ಪರಿ ಪರಿಯಾಗಿ ಕ್ಷಮೆ ಕೇಳಿ ಇಪ್ಪತ್ತು ಸಾವಿರ ಕೊಟ್ಟು ಹೋದವರನ್ನ, ನಾಲ್ಕು ದಿನದಿಂದ ಕಾಯುತ್ತಲೇ ಇದ್ದರೂ ತೋರಿಸಿಕೊಳ್ಳದ ಗೀತಾ, 'ಪರವಾಗಿಲ್ಲ ಬಿಡಿ' ಎಂದು ಧಾರಾಳವಾಗಿ ಕ್ಷಮಿಸಿ, ಮತ್ತೊಮ್ಮೆ ನನ್ನ ಬಳಿ 'ಪಾಪ ಕಣೆ ಅವರು, ಏನೋ ಕೆಲಸ ಇತ್ತಂತೆ. ಅದಕ್ಕೆ ಲೇಟಾಗಿದ್ದು ದುಡ್ಡು ತಂದ್ಕೊಡಕ್ಕೆ, ನಾನು ನಿನ್ನಂಗೆ ನೆಗೆಟಿವ್ ಥಿಂಕ್ ಮಾಡಿ ಹೆದರೇಬಿಟ್ಟಿದ್ದೆ' ಎಂದಳು. ಮುಂದೆ ಮೂರ್ನಾಲ್ಕು ತಿಂಗಳೂ ಬಡ್ಡಿ ಹಣ ಒಂದೋ ಎರಡೋ ವಾರ ತಡವಾಗಿಯೇ ತಲುಪಿತ್ತು. ನಂತರದ ತಿಂಗಳು 25ನೇ ತಾರೀಕು ಆದಮೇಲೂ ಸಾಲಗಾರ ಬಡ್ಡಿ ಹಣದೊಂದಿಗೆ ಬಾರದೇ ಇದ್ದಾಗ ಇವಳೇ ಕರೆ ಮಾಡಿದಾಗ, 'ನಾನು ಸಾಲ ಕೊಟ್ಟ ಪಾರ್ಟಿಗೆ ಬಿಸಿನೆಸ್‌ಲ್ಲಿ ಏನೋ ಕಷ್ಟವಾಗಿದೆಯಂತೆ, ಅದಕ್ಕೆ ಅವರೇ ಇನ್ನೂ ಬಡ್ಡಿ ಹಣ ಕೊಟ್ಟಿಲ್ಲ, ಅವರು ಕೊಟ್ಟ ತಕ್ಷಣ ತಂದುಕೊಡುತ್ತೇನೆ, ಈಗಲೇ ಕೊಡೋಕೆ ನನ್ನ ಹತ್ರಾನೂ ಇಲ್ಲ' ಎಂದಾಗ ಗೀತಾಳಿಗೆ ಯಾಕೋ ಹೊಸ ಅನುಮಾನ ಆತಂಕಗಳೆಲ್ಲಾ ಶುರುವಾಯಿತು. ಬಡ್ಡಿ ಹೋದರೆ ಹೋಗಲಿ, ತಮ್ಮ ಅಸಲು ಹತ್ತು ಲಕ್ಷ ಸಿಕ್ಕರೆ ಸಾಕು ಎನ್ನುವಂತಾದಳು ಗೀತಾ.

ದಿನದಿಂದ ದಿನಕ್ಕೆ ಗೀತಾಗೆ ಚಿಂತೆಯಿಂದ ನಿದ್ದೆ ಬಾರದಂತಾಯಿತು, ನಿದ್ದೆ ಬಾರದೆ ಕಣ್ಣಿನ ಕೆಳಗಿನ ಕಪ್ಪುವೃತ್ತಗಳು ಇನ್ನಷ್ಟು ಗಾಢವಾದಂತೆ ಕಾಣುತ್ತಿದ್ದವು. ಆಫೀಸಿನಲ್ಲೂ ಕೆಲಸದ ಮಧ್ಯೆ ಎಲ್ಲೋ ದೃಷ್ಟಿಸುತ್ತಾ ಯೋಚನೆಗಳಲ್ಲಿ ಮುಳುಗಿರುತ್ತಿದ್ದಳು. ಪದೇ ಪದೇ ಸಾಲ ಪಡೆದವರಿಗೆ ಫೋನ್ ಮಾಡಿ, ಅವರು ರಿಸೀವ್ ಮಾಡದೇ ಇದ್ದಾಗ ನಿಟ್ಟುಸಿರಿಡುತ್ತಿದ್ದಳು. ಜ್ಯೋತಿಷ್ಯ, ಭವಿಷ್ಯ, ಶಾಂತಿ, ಪೂಜೆ, ಹೋಮ ಎಂದೆಲ್ಲಾ ಅಲೆದಾಡಿ ಇನ್ನಷ್ಟು ದುಡ್ಡು ಕಳೆದುಕೊಂಡಿದ್ದಳು. 'ಗೀತಾ ಅವರಿಗೆ ಹುಷಾರಿಲ್ವಾ ಯಾಕೋ ಒಂಥರಾ ಇದ್ದಾರೆ, ಮಾತಾಡಿಸಿದರೂ ಗಮನಿಸದೇ ಹೋದರು' ಎಂದೆಲ್ಲಾ ಬೇರೆ ಸಹೋದ್ಯೋಗಿಗಳು ಗೀತಾಳ ಖಾಸಾ ದೋಸ್ತಿಯಾದ ನನ್ನನ್ನು ವಿಚಾರಿಸಲಾರಂಭಿಸಿದಾಗ, ಇಷ್ಟು ದಿನ ಇದೆಲ್ಲಾ ಅವಳ ಮೂರ್ಖತನದ ಪರಿಣಾಮ ಎಂದು ಕೋಪದಿಂದ ಬೈಯುತ್ತಿದ್ದ ನನಗೂ ಅವಳ ಬಗ್ಗೆ 'ಅಯ್ಯೋ ಪಾಪ' ಎನ್ನಿಸಿಬಿಟ್ಟಿತು. ಅವಳ ಸಮಸ್ಯೆಯನ್ನು ಪರಿಹರಿಸಬಹುದಾದ ಮಾರ್ಗಗಳಿಗಾಗಿ ನಾನೂ ಯೋಚಿಸತೊಡಗಿದ್ದೆ.

ಹೀಗೆ ಒಮ್ಮೆ ದಾರಿಯಲ್ಲಿ ಸಿಕ್ಕಾಗ ಪರಿಚಯದವರೊಬ್ಬರು, 'ತಮ್ಮ ಸಂಬಂಧಿಕರ ಮನೆಯಲ್ಲಿ ಬಾಡಿಗೆಗೆ ಇರುವ ಹೆಂಗಸಿನ ಮೈಮೇಲೆ ಪ್ರತಿ ಹುಣ್ಣಿಮೆಯಂದು ದೇವರು ಬರುತ್ತೆ, ಆಗ ಯಾವುದೇ ಸಮಸ್ಯೆ ಇದ್ದರೂ ಕೇಳಿದರೆ ಪರಿಹಾರ ಹೇಳುತ್ತಾರೆ, ಅದನ್ನೇ ನೋಡೋಕೆ ಹೋಗಿದ್ದೆ, ಈಗ ಅಲ್ಲಿಂದಲೇ ಬರುತ್ತಿದ್ದೇನೆ' ಎಂದರು. ಅದರ ಬಗ್ಗೆ ಎಲ್ಲಾ ವಿವರಗಳನ್ನೂ ಗೀತಾಳಿಗಾಗಿ ತಿಳಿದುಕೊಂಡೆ. ಮೈಮೇಲೆ ದೇವರು ಬರುವವರ ಮನೆ ವಿಳಾಸ, ಫೋನ್ ನಂಬರ್ ಸಹ ತೆಗೆದುಕೊಂಡೆ. ನನ್ನ ಆಸಕ್ತಿಯನ್ನು ನೋಡಿ ಅವರು, 'ನಿಮಗೇನು ಬಂದಿದೆ ಅಂಥಾ ಕಷ್ಟ' ಎಂದು ಕೇಳಿಯೇಬಿಟ್ಟರು. 'ನನ್ನ ಸ್ನೇಹಿತೆಯೊಬ್ಬಳು ಕೊಟ್ಟ ಸಾಲ ಯಾವಾಗ ವಾಪಾಸು ಸಿಗಬಹುದು ಅಂತಾ ಕೇಳಬೇಕಿತ್ತು, ನನ್ನ ಗೆಳತಿ ತುಂಬಾ ಕೊರಗುತ್ತಿದ್ದಾಳೆ' ಎಂದದ್ದಕ್ಕೆ. 'ಈ ತರದ ಪ್ರಾಬ್ಲಂಗಳಿಗೆ ಅವರೇ ಸರಿ' ಎಂದು ಘೋಷಿಸಿ ಹೊರಟರು.

ನಾನು ಮರುದಿನ ಬೆಳಗ್ಗೆ ಗೀತಾಳ ಸಪ್ಪೆ ಮುಖ ನೋಡುತ್ತಿದ್ದಂತೆಯೇ ದೇವರು ಬರುವ ಹೆಂಗಸಿನ